Doe-497
T-12-2

Reg No B G 155 19 — 6 — 72

55th Year of Publication ‡ 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಶ್ಚಿಮ ಬಂಗಾಳದಲ್ಲಿ ಜನೋಪಕಾರಿ ಯೋಜನೆ

ಮುಷ್ಕರ

ಬೊಂಬಾಯಿ— ಏರ್ ಇಂಡಿಯಾ ಪೈಲೆಟ್‌ಗಳೂ, ಇಂಜಿನಿಯರುಗಳೂ, ಸಾವಿಗೇಟರುಗಳೂ, ವಿಮಾನ ಅಪಹರಣ ಪ್ರತಿಭಟಿಸಿ ಸೋಮವಾರ್ದಿಮುಷ್ಕರ ನಡೆಸುವರು.

ಮೈಸೂರು ಪಿ ಡಬ್ಲ್ಯು ಡಿ,

ಕಾಲ ವಿಸ್ತರಣೆ

ವಿಷಯ— ಚಾಮರಾಜನಗರ ತಾಲ್ಲೂಕಿನಲ್ಲಿ ಯಿಡಿಯೂರು ಅಡ್ಡಹಳ್ಳಕ್ಕೆ ಅಡ್ಡಲಾಗಿ ಹೊಸ ಕೆರೆ ನಿರ್ಮಾಣ ಮಾಡುವುದು (ಉಳಿಕೆ ಕೆಲಸಗಳು)

ಕೊಳ್ಳೇಗಾಲ ತಾಲ್ಲೂಕಿನ ಅಜ್ಜಿಪುರ ಹತ್ತಿರ ಉಡುತೊರೆಹಳ್ಳಕ್ಕೆ ಅಡ್ಡಲಾಗಿ ಒಂದು ಪಿಕ್‌ಅಪ್ ನಿರ್ಮಾಣಮಾಡುವದು

ರೆಫರೆನ್ಸ್— ಟೆಂಡರ್ ಪ್ರಕಟಣೆ ನಂ. 43 / 71-72 / 22-3-72

(2) ಟಿಓ ನಂ ಡಿಬಿ/ಡಿ1/1643-58 ತಾ: 25-4-72

(3) ಡಿಟೊ ನಂ 5 / 72-73 ತಾ : 22-4-72

.....

ಮೇಲಿ ಟೆಂಡರು ಫಾರಂಗಳನ್ನು ಕೊಡುವುವಕ್ಕೆ ನಿಗದಿಯಾಗಿದ್ದ ಕಾಲಾವಧಿ ಮತ್ತು ಮೇಲ್ಕಂಡ ಕೆಲಸಕಾಗಿ ಪೂರ್ಣಗೊಳಿಸಿದ ಟೆಂಡರ್ ಸ್ವೀಕರಿಸಲು ನಿಗದಿ ಆಗಿದ್ದ ಕಾಲಾವಧಿ 7-6-72 ಇದ್ದದ್ದು 23-6-72 ರವರೆಗೆ ಸುಸ್ತೆ ವಿಸ್ತರಿಸಲ್ಪಟ್ಟಿದೆ.

ಮೇಲ್ಕಂಡ ಪ್ರಕಟಣೆಯಲ್ಲಿ ಸೂಚಿಸಲಾದ ಇತರ ಷರತ್ತುಗಳು ಬದಲಾವಣೆ ಆಗದೆ ಹಾಗೆಯೇ ಉಳಿದಿವೆ

ಸಹಿ/—
ಎಕ್ಸಿಕ್ಯುಟಿವ್ ಇಂಜಿನಿಯರ್
ಚಾಮರಾಜನಗರ ವಿಭಾಗ

ಉಪವಾಸ ಕೈಗೊಂಡಿದ್ದವರ ಸಾವು

ಸಿಮ್ಲಾ— ಕೆಲಸ ಕೇಳಿಕೆಗಾಗಿ 2 ವಾರಗಳಿಂದ ಉಪವಾಸ ಕೈಗೊಂಡಿದ್ದ ಗೃಹ ವಿಜ್ಞಾನ ಉಪಾಧ್ಯಾಯಿನಿ ಕುಮಾರಿ ಚಂಪಾದೇವಿ ಬಿಲಾಸಪುರದ ಆಸ್ಪತ್ರೆಯಲ್ಲಿ ನಿಧನರಾದರು — ತಾ|| 7 ರಿಂದ ಉಪವಾಸ ಪ್ರಾರಂಭಿಸಿರುವ 34 ಮಂದಿ ತರಹೇತಾದ ಉಪಾಧ್ಯಾಯರಲ್ಲಿ ಈಕೆಯು ಒಬ್ಬಳು — ಸಾವಿನ ಬಗ್ಗೆ ಸರಕಾರ ವಿಷಾದಿಸಿ, ನ್ಯಾಯಾಂಗ ತನಿಖೆಗೆ ಆಜ್ಞೆಯಾಗಿದೆ.

●

ಮೂಗಿನಶಾಸ್ತ್ರ

ಬೆಂಗಳೂರು— ಮೂಗು ನನ್ನ ನಡತೆಯನ್ನೂ ಭವಿಷ್ಯವನ್ನೂ ತಿಳಿಸುತ್ತದೆ ಎಂದು ಮೂಗಿನಶಾಸ್ತ್ರ ವಿಷಯದಲ್ಲಿ ರೋಟರಿ ಕ್ಲಬ್‌ನಲ್ಲಿ ಶ್ರೀ ಆರ್. ಶ್ರೀನಿವಾಸರವರು ಮಾಡಿದ ಭಾಷಣದಲ್ಲಿ ತಿಳಿಸಿದರು.

★

ಬೊಂಬಾಯಿನಲ್ಲಿ ರಸ್ತೆ ಅಕಸ್ಮಿಕಗಳು

ಗಗನಮುಟ್ಟುವ ಕಟ್ಟಡಗಳು, ಮಲಿನ ಚಪ್ಪರಗಳಿಂದ ಕೂಡಿದ 436 ಚದುರ ಕಿಲೋಮೀಟರಿನ, 6 ಮಿಲಿಯ ಜನರಿರುವ, ಕಿಕ್ಕಿರಿದ ಜನಸಂದಣಿಯ ರಸ್ತೆ ಮತ್ತು ಚಟಪಟಿಕೆಯಿಂದ ಕೂಡಿದ ಓಣಿಗಳಲ್ಲಿ 200000 ವಾಹನಗಳ ಓಡಾಟವಿರುವ, ವಿಶ್ವದಲ್ಲಿ 5 ನೇ ದೊಡ್ಡ ಪಟ್ಟಣವಾದ ಬೊಂಬಾಯಿನಲ್ಲಿ ದಿನವೂ ರಸ್ತೆ ಅಕಸ್ಮಿಕಗಳು ಇದ್ದೇ ಇದೆ ; ಈ ಸಂದರ್ಭದಲ್ಲಿ 1971 ರಲ್ಲಿ 558 ಸಾವುಗಳಾಗಿವೆ ; 1971 ರಲ್ಲಿ ವಿಶ್ವದಲ್ಲಿ 200000 ರಿಂದ 250000 ಸಾವುಗಳಾಗಿದ್ದು ಭಾರತದಲ್ಲಿ 15000 ಆಗಿದೆ.

★

ಬೊಂಬಾಯಿ— ಶನಿವಾರ ರಿಜರ್ವ್ ಬ್ಯಾಂಕಿನ 30000 ನೌಕರರು ಬೈಟಿಕ್ ಸತ್ಯಾಗ್ರಹ ನಡೆಸಿದ್ದರಿಂದ ಬ್ಯಾಂಕು ಕೆಲಸಕ್ಕೆ ತುಂಬಾ ಅಡಚಣೆಯಾಯಿತು.

ಅದ್ಭುತ ಯೋಜನೆ

ಕಲ್ಕತ್ತಾ— 5 ವರ್ಷಗಳಲ್ಲಿ ಕೈಗಾರಿಕೆಗಳಲ್ಲಿ ರೂ 1400 ಕೋಟಿ ಬಂಡವಾಳ ಹಾಕಿ, 1 ಕೋಟಿ ಜನರಿಗೆ ಉದ್ಯೋಗ ಒದಗಿಸುವ ಮಾರ್ಗ ಕಂಡುಹಿಡಿಯಲು ಪಶ್ಚಿಮ ಬಂಗಾಳ ಸರಕಾರ ನಾಲ್ಕು ಉನ್ನತ ಅಧಿಕಾರಿಗಳ ಸಮಿತಿಗಳನ್ನು ಸ್ಥಾಪಿಸಲಿದೆ.

★

ಉಪವಾಸ ಮುಕ್ತಾಯ

ಬೊಂಬಾಯಿ — ಮಹಾರಾಷ್ಟ್ರದಲ್ಲಿ ಹರಿಜನ ಮತ್ತು ಹೊಸಬೌದ್ಧರ ಮೇಲೆ ನಡೆದ ಅಮಾನುಷ ಕಾರ್ಯಗಳ ಬಗ್ಗೆ ಅಲ್ಲಿಯ ಸರಕಾರ ಗಮನ ಸೆಳೆಯಲು ಜನ ಸಂಘದ ಅಧ್ಯಕ್ಷ ಶ್ರೀ ಪಾಜಪೇಯಿ ಮತ್ತು 300 ಮಂದಿ ಸ್ವಯಂಸೇವಕರು 24 ಗಂಟೆ ಕಾಲದ ಉಪವಾಸ ನುಗಿಸಿದರು

★

ಕಳ್ಳ ಸಾಗಾಣಿಕೆ

ಬೊಂಬಾಯಿ— ತಾರ್ದೇವಿನ ಒಂದು ಗೋಡೌನಿನಿಂದ ರೂ 8 ಲಕ್ಷ ಮೌಲ್ಯದ ಅಕ್ರಮ ಸಾಗಾಣಿಕೆ ಬಟ್ಟೆಗಳನ್ನು ಕಸ್ಟಂ ಸಿಬ್ಬಂದಿಯವರು ವಶಪಡಿಸಿಕೊಂಡರು — ದಕ್ಷಿಣ ಬೊಂಬಾಯಿನ ಒಂದು ಸಾರಿಗೆ ಕಂಪೆನಿಯಿಂದ ರೂ 25000 ಬೆಲೆಯ 225 ಗಡಿಯಾರಗಳು ವಶಪಡಿಸಿಕೊಳ್ಳಲಾಯಿತು — ಭಾವನಗರದಲ್ಲಿ ಬೊಂಬಾಯಿಗೆ ಹೊರಟಿದ್ದ 3 ಮಂದಿಯಿಂದ ರೂ. 76000 ಬೆಲೆಯ ವಜ್ರಗಳನ್ನು ವಶಪಡಿಸಿಕೊಳ್ಳಲಾಯಿತು

★

15 ಸ್ಥಾನಗಳಿಗೆ 56 ಉಮೇದುವಾರರು

ಕೃಷ್ಣರಾಜನಗರ— ಇಲ್ಲಿಯ ಪುರಸಭಾ ಚುನಾವಣೆಯಲ್ಲಿನ 3 ವಿಭಾಗಗಳ 15 ಸ್ಥಾನಗಳಿಗೆ 56 ಮಂದಿ ಸ್ಪರ್ಧಿಸಿರುವರು.

ಭಾಷಾನಿ

1947 ರಲ್ಲಿ ಮೌಲಾನಾ ಭಾಷಾನಿಯ ಪ್ರಥಮ ಕೆಲಸವು, ಆತನ ಹಿಂದೂ ಜಮೀನ್ದಾರ ಮತ್ತು ಆತನ ಹಸುಗಳನ್ನು ಕೊಂದುದಾಗಿತ್ತು ; ಆದರಿಂದಲೇ ಅವನಿಗೆ ಭಾಷಾನಿ ಎಂದರೆ ಗೋಹತ್ಯಕಾರ ಎಂದು ಹೆಸರು ಬಂದಿತ್ತು [ಮಸೂರಾಶ್ರಮ ಪತ್ರಿಕೆ

★

ಅದ್ದೂರಿ ಸ್ವಾಗತ

ಪ್ರಾಗ್— ಇಲ್ಲಿಗೆ ಶನಿವಾರ ಆಗಮಿಸಿದ ಭಾರತ ಪ್ರಧಾನಿ ಇಂದಿರಾರವರ ಗೌರವಾರ್ಥವಾಗಿ 21 ಕುಶಾಲ ತೋಪುಗಳು ಹಾರಿಸಲಾಯಿತು — ಎಲ್ಲ ಮರ್ಯಾದೆಗಳೊಡನೆ ಸ್ವಾಗತಿಸಲಾಯಿತು.

●

ಕಂಡಕಡೆ ಗೋಳೀಬಾರು

ಲಕ್ನೊ— ವಾರಣಾಸಿ ಮತ್ತು ಫಿರೋಜಾಬಾದಿನಲ್ಲಿ ಪಾರ್ಲಿಮೆಂಟು ಒಪ್ಪಿತವಾಗಿರುವ ಅಲಿಘಡ ವಿಶ್ವವಿದ್ಯಾಲಯದ ತಿದ್ದುಪಡಿ ಮಸೂದೆಯ ಪ್ರತಿಭಟನಾ ಗಲಭೆಯವರನ್ನು ಕಂಡೊಡನೆ ಗುಂಡುಹೊಡೆಯಲು ಉತ್ತರ ಪ್ರದೇಶ ಸರಕಾರ ಆಜ್ಞೆ ಮಾಡಿದೆ - ವಾರಣಾಸಿಯಲ್ಲಿ ಗೋಳೀಬಾರು ಹೊಡೆತಕ್ಕೆ ಸಿಕ್ಕಿದ 6 ಮಂದಿಯಲ್ಲಿ ಇಬ್ಬರು ಕೂಡಲೇ ಸತ್ತರು — ಫಿರೋಜಾಬಾದಿನಲ್ಲಿ ಗುಂಡಿನೇಟಿಗೆ ಇಬ್ಬರು ತುತ್ತಾದರು — 800 ಮಂದಿಯ ದಸ್ತಗಿರಿಯಾಗಿದೆ.

★

ಸಾಧ್ಯವಿಲ್ಲ

ಬೆಂಗಳೂರು — ಎಫ್. ಜೆ. ಓ ಸಂಘದ ಅಧ್ಯಕ್ಷರೂ ಕಾರ್ಯದರ್ಶಿಯವರೂ ಆರ್ಥಮಂತ್ರಿ ಶ್ರೀ ಫೋರ್ಡೆಯವರನ್ನು ಭೇಟಿಮಾಡಿ, ಎಫ್ ಜಿ ಓ ಗಳಿಗೆ ಕೇಂದ್ರದ ದರದಂತೆ ತುಟ್ಟಿಭತ್ಯ ಹೆಚ್ಚಿಸಬೇಕೆಂದು ಕೇಳಿದರೆಂದೂ, ರಾಜ್ಯದ ಹಣಕಾಸಿನ ಕಷ್ಟಸ್ಥಿತಿಯಲ್ಲಿ ಅದು ಸಾಧ್ಯವಿಲ್ಲವೆಂದು ತಿಳಿಸಲಾಯಿತೆಂದು ಗೊತ್ತಾಗಿದೆ.

ಜನಸಂಖ್ಯೆ ನಿಯಂತ್ರಣ

ನವದೆಹಲಿ— ಉತ್ತರ ಪ್ರದೇಶ ಮತ್ತು ಮೈಸೂರಿನಲ್ಲಿ ಆರಿಸಲ್ಪಟ್ಟ ಭಾಗಗಳಲ್ಲಿ ಜನಸಂಖ್ಯೆ ನಿಯಂತ್ರಣ ಪ್ರಾಜೆಕ್ಟಿಗೆ ಸ್ವೀಡ್ ಮತ್ತು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘವು ರೂ. 2 ಕೋಟಿ ಕೊಡಲಿವೆ

ಶಿಕ್ಷಕರು ಸಿಕ್ಕಿಲ್ಲ

ಕಲ್ಲೀಕೋಟೆ— ಉತ್ತರ ಭಾರತ ರಾಜ್ಯಗಳಲ್ಲಿ ವಿದ್ಯಾರ್ಥಿಗಳಿಗೆ ಹಿಂದೀ ಮಾಧ್ಯಮದಲ್ಲಿ ದಕ್ಷಿಣ ಭಾರತ ಭಾಷೆಗಳ ಶಿಕ್ಷಣ ಕೊಡಲು ಹೆಚ್ಚು ಮಂದಿ ಉಪಾಧ್ಯಾಯರನ್ನು ಪಡೆಯಲು ಸಾಧ್ಯವಾಗಿಲ್ಲವೆಂದು ಕೇಂದ್ರ ಸರಕಾರಕ್ಕೆ ಹಿಂದಿ ಬಗ್ಗೆ ಸಲಹೆಗಾರರಾದ ಶ್ರೀ ಜಗದೀಶಚಂದ್ರ ಮಾಥೂರರು ಪತ್ರಿಕೆಯವರಿಗೆ ತಿಳಿಸಿದರು.

ಕನಿಷ್ಠ ವೇತನ ನಿರ್ಧರಿಸಲು

ಬೆಂಗಳೂರು— ಬೀಡಿ, ಸಿಗಾರ್, ಅಂಗಡಿ, ವಾಣಿಜ್ಯ ಸಂಸ್ಥೆ, ರಸ್ತೆ ನಿರ್ಮಾಣ ಮತ್ತು ನ್ಯೋಡಿಕೊಳ್ಳುವುದು, ಹೊಲಿಗೆ, ಅಗರಬತ್ತಿ, ಇತ್ಯಾದಿ ಕೈಗಾರಿಕೆಗಳಲ್ಲಿ ಕನಿಷ್ಠ ವೇತನ ನಿಷ್ಕರ್ಷಿಸಲು ಸರಕಾರ ಕ್ಷಿಪ್ರದಲ್ಲೇ ಸಮಿತಿ ನೇಮಿಸಲಿದೆ.

ನಹಾಂಗ್ ಸಿಕ್ಕರು

ನವದೆಹಲಿ— ಅಮೃತಸರದಿಂದ ತರ್ಕತರ್ಕಗೆ ಟಿಕೇಟಿಲ್ಲದೆ ರೈಲಿನಲ್ಲಿ ಬಂದ ನಹಾಂಗ ಸಿಕ್ ಒಬ್ಬನು, ಟಿಕೇಟು ಕೇಳಲಾಗಿ, ತಾನು ದೇವರ ಮನುಷ್ಯನೆಂದೂ ದೇವರ ಸ್ಥಳವಾದ ಗುರುದ್ವಾರಕ್ಕೆ ಭೇಟಿ ಕೊಡಲು ಬಂದಿರುವೆನೆಂದೂ ಹೇಳಲು, ಟಿಕೇಟು ಛಾರ್ಜು ಮತ್ತು ಜುಲ್ಮಾನೆ ಕೊಡದಿದ್ದರೆ ಜೈಲಿಗೆ ಹೋಗಬೇಕೆಂದು ತಿಳಿಸಲಾಯಿತು – ಹೀಗೆ ಕೆಲವು ದಿನಗಳ ಹಿಂದೆ ಅಮೃತಸರದ ಹತ್ತಿರದ ವರ್ಕಾದಲ್ಲಿ ಒಬ್ಬ ನಹಾಂಗ್ ಸಿಕ್ಕನ್ನು ಟಿಕೇಟ್ಚೆಎಗ್ಜಾಮಿನರನ್ನು ಇರಿದು ಕೊಂದು, ಒಬ್ಬ ಪೋಲೀಸು ಪೇದೆಗೆ ತೀವ್ರ ಗಾಯಗೊಳಿಸಿದನು.

ವುಡ್‌ಲ್ಯಾಂಡ್ಸ್ 16-6-72ರಿಂದ ಅಮೋಘ 7 ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರೀಬಾಯಿ
ನಿರ್ದೇಶನ: ರಾತಿ ಸಹೋದರರು. ನಿರ್ಮಾಪಕರು: ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಸಿಂಹಸ್ವಪ್ನ

ಅಪೇರಾ 16 6 72 ರಿಂದ

.... ಮನಮೋಹಕ ಹಿಂದಿ ಚಿತ್ರ ....

ರಾಜಾ ನಾಬ್

ಈಸ್ಟ್‌ಮನ್‌ಕಲರ್

ಪಾತ್ರ: ಶಶಿಕಪೂರ್ ನಂದ ರಾಜೇಂದ್ರನಾಥ್ ಆಘೆ
ದಿಗ್ದರ್ಶನ: ಸೂರಜ್ ಪ್ರಕಾಶ್ ಸಂಗೀತ: ಕಲ್ಯಾಣ್‌ಜಿ ಆನಂದಜಿ
ದಿನ 3 ಆಟಗಳು

Contribute Liberally to the National Defence Fund

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore 4

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ - ಹುಡುಗ

SHAKTI

SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....